ಬೈಫರ್ಕೇಟ್ ಮಾಡಿರುತ್ತೇವೆ. ಕರ್ನಾಟಕ ಸ್ಲಮ್ ಕ್ಲಿಯರೆನ್ಸ್ ಬೋರ್ಡ್, ಗುಲ್ಬರ್ಗಾ, ಹುಬ್ಬಳ್ಳಿ, ಧಾರವಾಡ, ಬೆಂಗಳೂರು ಇವುಗಳ ಸಮಗ್ರ ಯೋಜನೆಗೆ 40 ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿ ವರ್ಲ್ಡ್ ಬ್ಯಾಂಕ್‌ಗೆ ಸಬ್‌ಮಿಟ್ ಮಾಡಿರುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ : ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲ. ಮಾನ್ಯ ಮಂತ್ರಿಯವರ್ಯರು ಏನು ಹೇಳಿದ್ದಾರೆ ಅದೆಲ್ಲಾ ಕರೆಟ್ಟ್. ಇಲ್ಲಿ ಬಂದಿರುವುದು ವರ್ಲ್ಡ್ ಬ್ಯಾಂಕ್ ಟೀಮ್‌ನವರು ಒಂದು ಪ್ರಪೋಸಲ್ ಕೊಟ್ಟಿದ್ದಾರೆ. 600-700 ಕೋಟಿ ರೂಪಾಯಿಗಳನ್ನು ಕರ್ನಾಟಕ ರಾಜ್ಯಾದ್ಯಂತ ಇರುವ 7-8 ನಗರಗಳಿಗೆ, ಅಲ್ಲಿನ ಅರ್ಬನ್ ಡೆವೆಲಪ್‌ಮೆಂಟ್ ವಿಷಯದಲ್ಲಿ ಅವಕಾಶ ಮಾಡಿಕೊಡಬೇಕೆಂದು ಪ್ರಪೊಸಲ್ ಕೊಟ್ಟಿದ್ದಾರೆ. ಈ ವಿಷಯವಾಗಿ ಒಂದೆರಡು ಸಲ ಬಂದು ಮಾತನಾಡಿದ್ದಾರೆ. ಅದು ಆದಮೇಲೆ ಎರಡು ವರ್ಷ ಕಳೆದರೂ ಯಾರೂ ಹೆಚ್ಚುತೀವ್ರತೆಯನ್ನು ತೋರಿಸಿಲ್ಲ. ಅವರು ಮತ್ತೆ ಈ ಒಂದು ಪ್ರಪೋಸಲ್ ವಿಚಾರದಲ್ಲಿ ಮಾತನಾಡುವುದಕ್ಕೆ ಬರುವುದಕ್ಕೆ ತಯಾರಾಗಿದ್ದಾರೆ. ಈ ವಿಚಾರದಲ್ಲಿ ನೇರವಾಗಿ ಪ್ರಶ್ನೆ ಕೇಳುತ್ತಿದ್ದೇನೆ, ಸರಕಾರದವರು ಅವರನ್ನು ಬರಮಾಡಿಕೊಂಡು ಮಾತನಾಡುವುದಕ್ಕೆ ತಯಾರಾಗಿದ್ದಾರೆಯೇ?

ಶ್ರೀ ಕೆ.ಜೆ. ಜಾರ್ಜ್ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ್ದೇನೆ. ಕೆಲವೊಂದು ವಿಚಾರದಲ್ಲಿ ವರ್ಲ್ಡ್ ಬ್ಯಾಂಕ್ ಮುಂದೆ ಪ್ರಪೋಸಲ್ ಕೊಟ್ಟಿದ್ದೇವೆ. ವರ್ಲ್ಡ್ ಬ್ಯಾಂಕ್ ಜೊತೆಯಲ್ಲಿ ಸರಕಾರ ಚರ್ಚೆ ಮಾಡಿ ಆದಷ್ಟು ಬೇಗನೆ ಹಣವನ್ನು ಪಡೆಯುವ ಕೆಲಸ ಮಾಡುತ್ತದೆ.

ಅಧ್ಯಕ್ಷರು : ಡಿ.ಎ. ಚಿನ್ನಪ್ಪನವರೇ ನಿಮ್ಮ ಪ್ರಶ್ನೆ 511 (2704)ಕ್ಕೆ ಎರಡು ವಾರ ಟೈಮ್ ಕೇಳಿದ್ದಾರೆ

ಶ್ರೀ ಡಿ.ಎ. ಚಿನ್ನಪ್ಪ : ನಾನು ಪ್ರಶ್ನೆ ಹಾಕಿದ್ದೇನೆ.

ಅಧ್ಯಕ್ಷರು : ಅದೇ ಹೇಳಿದೆನಲ್ಲ, ಹದಿನೈದು ದಿವಸ ಸಮಯ ಇದಕ್ಕೆ ಕೇಳಿದ್ದಾರೆ. ಆದಷ್ಟು ಬೇಗ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಡಿ.ಎ. ಚಿನ್ನಪ್ಪ : ಅಷ್ಟರಲ್ಲಿ ಅಸೆಂಬ್ಲಿ ಮುಗಿದುಹೋದರೆ.

ಅಧ್ಯಕ್ಷರು : ಆದಷ್ಟು ಬೇಗ ತರಿಸಿಕೊಡುತ್ತೇನೆ.

ರಾಜ್ಯದಲ್ಲಿ ಮನೆ ಕಂದಾಯ ನಿಗದಿ ಬಗ್ಗೆ

2709 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮನೆಗಂದಾಯ ನಿಗಧಿ ಮಾಡಲು ಸರ್ಕಾರದ ಬಳಿ ವೈಜ್ಞಾನಿಕ ಅಳತೆಗೋಲು ಇದೆಯೇ?

ಆ) ಇದ್ದರೆ ಅದು ಯಾವುದು?

ಇ) ಇಲ್ಲದಿದ್ದಲ್ಲಿ ಯಾವ ವೈಜ್ಞಾನಿಕ ಕ್ರಮವನ್ನು ಅಳವಡಿಸುವಿರಿ ಹಾಗೂ ಎಂದಿನಿಂದ?

ಈ) ಈಗ ಜಾರಿಯಲ್ಲಿರುವ ಅವೈಜ್ಞಾನಿಕ ನಿಗಧಿಯನ್ನು ಮಾರ್ಪಾಡುಗೊಳಿಸಲಾಗುವುದೆ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇದರ ಬಗ್ಗೆ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ನೇಮಿಸಲಾಗಿದೆ. ಅದರ ವರದಿಯನ್ನು ಕಾಯಲಾಗಿದೆ.

ಈ) ವರದಿಯು ಸ್ವೀಕೃತವಾದ ನಂತರ ಇದನ್ನು ಪರಿಶೀಲಿಸಲಾಗುವುದು.

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಮನೆಗಂದಾಯ ನಿಗದಿ ಮಾಡಲು ಸರಕಾರದ ಬಳಿ ವೈಜ್ಞಾನಿಕ ಅಳತೆಗೋಲು ಏನಾದರೂ ಇದೆಯೇ ಎಂದು ಕೇಳಿದರೆ ಇರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಸತ್ಯ ಹೇಳಿದ್ದಾರೆ. ಈ ಪ್ರಶ್ನೆಯನ್ನು ನಾನು ವಿಧಾನಸಭೆಗೆ ಬಂದಾಗಿನಿಂದಲೂ ಕೇಳುತ್ತಿದ್ದೇನೆ. ರಾಜ್ಯದಲ್ಲಿ ಮನೆಗಂದಾಯದ ದೃಷ್ಟಿಯಿಂದ ಏನೂ ಅಳತೆಗೋಲು ಇಲ್ಲ. ವೈಜ್ಞಾನಿಕ ರೂಪದಲ್ಲಿ ನಿಗದಿ ಮಾಡುವಿಕೆ ಇಲ್ಲ. ಅಧಿಕಾರಗಳು ಬರುತ್ತಾರೆ, ಬೇರೆ ನಗರ ಪ್ರದೇಶಗಳಿಗೂ ಬರುತ್ತಾರೆ, ಪ್ರಭಾವ ಬೀರಿ ಪುರಸಭೆಗಳಿಗೆ ಹೋಗುತ್ತಾರೆ, ಸಾಕಷ್ಟು ಹಣ ಲೂಟಿ ಮಾಡುತ್ತಿದ್ದಾರೆ. ಆರ್.ಸಿ.ಸಿ. ಮನೆಯನ್ನು ಹೆಂಚಿನ ಮನೆ ಎಂದು ತೀರ್ಮಾನ ಮಾಡಿ ಅದಕ್ಕೇ ಒಂದು ಮನೆಗಂದಾಯ ಹಾಕುತ್ತಾರೆ. ಹೆಂಚಿನ ಮನೆಯನ್ನು ಆರ್.ಸಿ.ಸಿ. ಮನೆ ಎಂದು ತೀರ್ಮಾನ ಮಾಡಿ ಒಂದು ರೀತಿಯ ಕಂದಾಯ ಹಾಕಿದ್ದಾರೆ. ನನ್ನ ಹತ್ತಿರ ಉದಾಹರಣೆ ಇದೆ. 10 ಚದರಡಿ ಮನೆಗೆ 482 ರೂಪಾಯಿ ಕಂದಾಯ ಹಾಕಿದ್ದಾರೆ. 5 ಚದರಡಿ ಮನೆಗೂ 482 ರೂಪಾಯಿ ಮನೆ ಗಂದಾಯ ಹಾಕಿದ್ದಾರೆ.

ಶ್ರೀ ಬೈರೇಗೌಡ : ಚದರಡಿ ಅಲ್ಲ, 10 ಚದರ 10 ಬೈ 10 ಅಡಿಗೆ ಒಂದು ಸ್ಕ್ವೇರ್ ಆಗುತ್ತದೆ. ಮನೆ ಕಂದಾಯ ನಿಗಧಿ ಮಾಡಲು ಯಾವುದೇ ಒಂದು ನೀತಿ ನಿಯಮ ಇಲ್ಲ. ಯಾರು ಅಧಿಕಾರಿಗಳಿಗೆ ಹಣ ಕೊಡುತ್ತಾರೋ ಅವರಿಗೆ ಅನುಕೂಲವಾಗುವ ರೀತಿ ತೀರ್ಮಾನ ಮಾಡುತ್ತಾರೆ. ಅವರು ಹಾಕಿದ್ದೇ ರೇಟು. ಅದನ್ನು ಪ್ರಶ್ನೆ ಮಾಡುವ ಪ್ರಶ್ನೆಯೇ ಇಲ್ಲ. ಯಾರಾದರೂ ಪ್ರಶ್ನೆ ಮಾಡಿದರೆ ಸಂಬಂಧಪಟ್ಟ ಡೈರೆಕ್ಟರ್ ಅಲ್ಲಿಗೆ ಬರುತ್ತಾರೆಂದು ಹೇಳುತ್ತಾರೆ ಇಡೀ ರಾಜ್ಯಕ್ಕೆ ಒಬ್ಬ ಡೈರೆಕ್ಟರ್ ಇರುವುದು ಅವರು ಎಲ್ಲಾ ಕಡೆ ಹೋಗುವುದು ಕಷ್ಟವಾಗುತ್ತದೆ. ನಾನು ಸರ್ಕಾರಕ್ಕೆ ಈ ದಿಕ್ಕಿನಲ್ಲಿ ಬಹಳ ಹಿಂದೆ ಒಂದು ಪ್ರಶ್ನೆ ಕೇಳಿದ್ದೆ. ಆ ಪ್ರಶ್ನೆಗೆ ಆಗ ಏನು ಉತ್ತರ ಕೊಟ್ಟಿದ್ದರೋ ಅದೇ ಉತ್ತರ ಈಗಲೂ ಬಂದಿದೆ. ದಿನಾಂಕ 16-5-90ರಲ್ಲಿ ಒಂದು ಕಮಿಟಿ ಮಾಡಿದ್ದೇವೆ. ಒಂದು ವರ್ಷ 4 ತಿಂಗಳು ಆಗಿದೆ. ಅಂದಿನಿಂದ ಇದುವರೆಗೂ ಎರಡು ಬಾರಿ ಈ ಕಮಿಟಿ ಸೇರಿದರೂ ಯಾವುದೇ ಒಂದು ತೀರ್ಮಾನ ತೆಗೆದುಕೊಂಡಿಲ್ಲ. ಈ ಒಂದು ಕಮಿಟಿ ಏನು ಮಾಡುತ್ತಿದೆ. ಈ ಕಮಿಟಿಯಲ್ಲಿ ಚುನಾಯಿತ ಪ್ರತಿನಿಧಿಗಳು ಒಬ್ಬರೂ ಇಲ್ಲ. ಎಲ್ಲಾ ಅಧಿಕಾರಿಗಳೇ ಇದ್ದಾರೆ. ಇದರಲ್ಲಿ ಚುನಾಯಿತ ಪ್ರತಿನಿಧಿಗಳನ್ನು ಸೇರಿಸುತ್ತೀರಾ? ಮೊದಲನೆಯ ಪ್ರಶ್ನೆ ಇನ್ನು ನನ್ನ ಎರಡನೇ ಪ್ರಶ್ನೆ ಏನೆಂದರೆ ಈ ಒಂದು ಸಮಿತಿ ನಿರ್ದಿಷ್ಟ ಸಮಯದಲ್ಲಿ ಮನೆ ಕಂದಾಯದ ಬಗ್ಗೆ ವೈಜ್ಞಾನಿಕ ನೀತಿ ವಿಧಿವಿಧಾನಗಳನ್ನು ಅಳವಡಿಸಿ ಇಂತಿಷ್ಟೇ ಸಮಯದಲ್ಲಿ ಕೊಡಬೇಕೆಂದು ತೀರ್ಮಾನ ಮಾಡುತ್ತೀರಾ?

ಶ್ರೀ ಕೆ.ಜೆ. ಜಾರ್ಜ್ : ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾನು ಸಚಿವನಾದ ಮೇಲೆ ನಗರಸಭೆ ಮಂಡಲಿಯ ಕಾರ್ಪೊರೇಷನ್ ಈ ಮನೆ ಕಂದಾಯ ಮತ್ತು ಪ್ರಾಪರ್ಟಿ ಟ್ಯಾಕ್ಸ್‌ನ್ನು ಹಾಕಲು ಏನು ಮಾಡುತ್ತಿದ್ದರು ಅಂದರೆ ಇಲ್ಲಿಂದ ಮುನಿಸಿಪಾಲಿಟಿಗಳಿಗೆ ಮತ್ತು ನಗರಸಭೆಗಳಿಗೆ ಜನರನ್ನು ಕಳುಹಿಸುತ್ತಿದ್ದರು. ಇಲ್ಲಿನ ಜನಗಳು ಹೋಗಿ ಅಸ್ಸೆಸ್ ಮಾಡುತ್ತಿದ್ದರು. ನಿನ್ನೆ ಮಾನ್ಯ ಸದಸ್ಯರಾದ ಈಶ್ವರಪ್ಪನವರು

ಮತ್ತು ಅನಂತಕೃಷ್ಣರವರು ಈ ಪ್ರಶ್ನೆಯನ್ನು ಕೇಳಿದರು. ಇಲ್ಲಿಂದ ಯಾರು ಹೋಗುತ್ತಾರೋ ಅವರಿಗೆ ಸಾಕಷ್ಟು ಡಿಸ್‌ಕ್ರಿಶನರಿ ಪವರ್ಸ್ ಇರುತ್ತದೆ. ಅವರು ಎಷ್ಟು ಬೇಕಾದರೂ ಹಾಕಬಹುದು ಎಂದು. ಇವತ್ತು ಬೆಳಿಗ್ಗೆ ನಾನು ನಮ್ಮ ಮುನಿಸಿಪಲ್ ಡೈರೆಕ್ಟರ್‌ನ್ನು ಕರೆಸಿ ಇಲ್ಲಿಂದ ನೀವು ಅಸೆಸ್ ಮಾಡುವುದಕ್ಕೆ ಯಾರನ್ನೂ ಕಳುಹಿಸಬೇಕಾಗಿಲ್ಲ.

ಅಲ್ಲಿನ ಮುನಿಸಿಪಾಲಿಟಿಯಲ್ಲಿ ಅಥವಾ ಕಾರ್ಪೋರೇಷನಲ್ಲಿರತಕ್ಕಂಥಾವರನ್ನೇ ಒಬ್ಬರನ್ನು ಕಳುಹಿಸಿ ಅಸ್ಸೆಸಿಂಗ್ ಆಫೀಸರ್ ಎಂದು ಮಾಡಬಹುದು ಇಲ್ಲಿಂದ ಬೇಕಾದರೆ ಇನ್ಸ್‌ಪೆಕ್ಟಿಂಗ್ ಆಫೀಸರ್ಸ್‌ನ್ನು ಕಳುಹಿಸಿ ರ್‍ಯಾಂಡಂ ಚೆಕ್ಕಿಂಗ್ ಮಾಡುವ ಅವಕಾಶ ಮಾಡಿಕೊಳ್ಳಿ ಎಂದು ಹೇಳಿ ತೀರ್ಮಾನ ತೆಗೆದುಕೊಂಡಿದ್ದೇವೆ. ಇನ್ನು ಸೈಂಟಿಫಿಕ್ ಆಗಿ ಅಸ್ಸೆಸ್‌ಮೆಂಟ್ ಮಾಡುವುದು ನಿಜವಾಗಿ ಅವಶ್ಯಕತೆ ಇದೆ. ಈ ವಿಚಾರದಲ್ಲಿ ಈಗಾಗಲೇ ಕಮಿಟಿ ಸೇರಿದೆ. ಗುಲ್ಬರ್ಗದಲ್ಲಿ ಸಂಪೂರ್ಣವಾಗಿ ಕಂಪ್ಯೂಟರೈಜ್ಡ್ ಮಾಡಿದ್ದಾರೆ. ಆ ವಿಷಯ ಸಹ ಸಮಿತಿ ಮುಂದೆ ಇದೆ. ಇದು ಜೋನ್ ವೈಜ್ ಇರಬೇಕೇ ಯಾವ ಟೈಪ್ ಮನೆ ಇರಬೇಕು, ಸ್ಟಯರ್ ಫೀಟ್‌ಗೆ ಇರಬೇಕೇ ಈ ತರಹ ಯಾವರೀತಿ ಎಂದು ಚಿಂತನೆ ಮಾಡುತ್ತಿದ್ದೇವೆ. ಆದಷ್ಟು ಬೇಗ ವೈಜ್ಞಾನಿಕ ರೀತಿಯಲ್ಲಿ ಮನೆ ಕಂದಾಯ ಪ್ರಾಪರಿಟಿ ಟ್ಯಾಕ್ಸ್ ಅಸ್ಸೆಸ್‌ಮೆಂಟ್ ಮಾಡುವ ಕೆಲಸವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಸಚಿವರು ಹೇಳಿದರು ಇಲ್ಲಿಂದ ನಾವು ಕಳುಹಿಸುವುದಿಲ್ಲ. ಅಲ್ಲಿಯೇ ಇರುವವರನ್ನೇ ನೇಮಕ ಮಾಡುತ್ತೇವೆಂದು. ಇದರ ಅರ್ಥ ಇಲ್ಲಿಂದ ಬಂದು ದುಡ್ಡು ಹೊಡೆದುಕೊಳ್ಳುವುದು ಬೇಡ ಅಲ್ಲಿರುವವರಿಗೆ ಅವಕಾಶ ಮಾಡಿ ಕೊಟ್ಟಿದ್ದೇವೆಂದು. ಇದರಿಂದ ಜನಗಳಿಗೆ ಏನೂ ಉಪಯೋಗವಾಗುವುದಿಲ್ಲ. ಇಡೀ ರಾಜ್ಯದಲ್ಲಿ ಯಾರು ಅಸ್ಸೆಸ್ ಮಾಡುತ್ತಿದ್ದಾರೆ ಅವವು ಲೂಟಿ ಮಾಡುವುದಕ್ಕೆ ಒಂದು ದೊಡ್ಡ ಅವಕಾಶ ಮಾಡಿಕೊಟ್ಟಿದ್ದೀರಿ. ನನ್ನ ಪ್ರಶ್ನೆ ಏನೆಂದರೆ ಇಂತಿಷ್ಟೇ ಸಮಯದಲ್ಲಿ ಎಂದು ಆ ಸಮಿತಿಯವರಿಗೆ ಕಾಲ ನಿಗಧಿ ಮಾಡಬೇಕು ಎಂದು ಸರ್ಕಾರ ಆಜ್ಞೆ ಮಾಡುತ್ತದೆಯೇ? ಒಂದು ವರ್ಷ ಕೊಡಿ ಆರು ತಿಂಗಳು ಕೊಡಿ ಇಂತಿಷ್ಟು ಸಮಯ ಎಂದು ಕೊಡಿ ನೀವು ಎಷ್ಟೇ ಸಮಯ ಕೊಡಿ ಆ ಸಮಯದೊಳಗೆ ಅವರು ಒಂದು ನೀತಿ ನಿಯಮ ತೀರ್ಮಾನ ಮಾಡಬೇಕು ಸರ್ಕಾರ ಎಷ್ಟು ಸಮಯದಲ್ಲಿ ಆ ಸಮಿತಿಯಿಂದ ವರದಿ ಕೊಡಿಸುವುದಕ್ಕೆ ಆಜ್ಞೆ ಮಾಡುತ್ತದೆ?

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೇ ಇನ್ನು 6 ತಿಂಗಳಲ್ಲಿ ವೈಜ್ಞಾನಿಕ ರೀತಿಯಲ್ಲಿ ಪ್ರಾಪರಿಟಿ ಟ್ಯಾಕ್ಸ್ ಹೌಸಿಂಗ್ ಅಸ್ಸೆಸ್‌ಮೆಂಟ್ ಮಾಡಲು ಸರ್ಕಾರ ತೀರ್ಮಾನ ತೆಗೆದುಕೊಂಡು ಅದರ ಪ್ರಕಾರ ಮಾಡುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಬಿನಂದನೆಗಳು.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ತುಮಕೂರು ನಗರದಲ್ಲಿ ವಾಹನ ರಿಪೇರಿ ಮಾಡುವವರನ್ನು ತೆರವು ಮಾಡುವುದು.

2768 - ಶ್ರೀ ಬಿ.ಎಸ್. ಶಿವನಂಜಪ್ಪ, (ಗುಬ್ಬಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?